ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಆರ್.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದಸ್ಯರು ಹೇಳಿರುವಂತೆ ಹಾಲಿ 64 ವೃತ್ತಿ ಶಿಕ್ಷಣ ಕೋರ್ಸುಗಳನ್ನು ಕೊಟ್ಟಿದ್ದೆವು, ಕೊಟ್ಟಿದ್ದನ್ನು ಅವರು ನಡೆಸದೇ ಬಿಟ್ಟಿದ್ದಾರೆ, ಬಿಲ್ಡಿಂಗ್ ಫಂಡ್ ಮಾತ್ರ ಅವರಿಗೆ ಹೋಗಿದೆ. ಅವು ತೆಗೆದುಕೊಂಡಿರುವ ವಸ್ತುಗಳು ಮತ್ತು ಸಂಬಳ ಮಾತ್ರ ನಮ್ಮಲ್ಲಿ ಉಳಿದಿದೆ. ಆ ಕೋರ್ಸು ಹಾಗೆಯೇ ಪೆಂಡಿಂಗ್ ಇದೆ, ನಾವು ಬಿಲ್ಡಿಂಗ್ ಫಂಡನ್ನು ಕೊಡುವುದಕ್ಕಾಗುವುದಿಲ್ಲ. ಅವರು ಕೇಳಿದ ರೀತ್ಯ ಬಿಲ್ಡಿಂಗ್ ಫಂಡ್ ಬೇಡವೆನ್ನುವುದಾದರೆ ಮಂಜೂರಾತಿ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಪುಟ್ಟಣ್ಣಯ್ಯನವರೆ, ತಮ್ಮ ಪ್ರಶ್ನೆ ಸಂಖ್ಯೆ: 476 (3735) ಹೌಸಿಂಗ್ ಡಿಪಾರ್ಟ್‌ಮೆಂಟ್‌ಗೆ ವರ್ಗವಾಗಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯ ವಿಷಯದ ವ್ಯಾಪ್ತಿಗೆ ನಾಲ್ಕು ಜನ ಮಂತ್ರಿಗಳು ಬರುತ್ತಾರೆ. ಒಂದು ಪರಿಸರ ಇಲಾಖೆಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ, ವಸತಿ ಇಲಾಖೆಗೆ ಮತ್ತು ಡಿ.ಎಲ್.ಡಿ.ಬಿ. ಇಲಾಖೆಗೆ, ಈ ನಾಲ್ಕು ಇಲಾಖೆಗಳ ಮಂತ್ರಿಗಳು ಸೇರಿ ನನಗೆ ಉತ್ತರ ಕೊಡಬೇಕು.

ಅಧ್ಯಕ್ಷರು: ನಾನು ತಮ್ಮ ಪ್ರಶ್ನೆಯನ್ನು ತರಿಸಿ ನೋಡಿ ಯಾರಿಂದ ಉತ್ತರ ಕೊಡಿಸಬೇಕೆಂಬ ಬಗ್ಗೆ ನಾನೇ ಸ್ವತಃ ತೀರ್ಮಾನ ತೆಗೆದುಕೊಳ್ಳುತ್ತೇನೆ.

ವಿಷಯ: ಸುಳ್ಯ ವಿಧಾನ ಸಭಾಕ್ಷೇತ್ರದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಖಾಲಿ ಹುದ್ದೆಗಳು.

477 (3737)

ಶ್ರೀ ಎಸ್.ಅಂಗಾರ (ಸುಳ್ಯ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಪ್ರಾಥಮಿಕ ಹಾಗು ಸಮುದಾಯ ಆರೋಗ್ಯ ಕೇಂದ್ರಗಳಿವೆ? ಎಷ್ಟು ಜನ ವೈದ್ಯಾಧಿಕಾರಿಗಳು ಇರಬೇಕಾಗಿತ್ತು? ಎಷ್ಟು ಜನ ಇದ್ದಾರೆ? ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 1 ಸಮುದಾಯ ಆರೋಗ್ಯ ಕೇಂದ್ರ

ಹಾಗೂ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಇವುಗಳಿಗೆ 10 ವೈದ್ಯರ ಹುದ್ದೆ ಮಂಜೂರಾಗಿದ್ದು, 7 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 3 ಹುದ್ದೆಗಳು ಖಾಲಿ ಇರುತ್ತವೆ. ಶೀಘ್ರದಲ್ಲಿಯೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

12. 10. ಪಿಎಂ

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಸರ್ಕಾರದ ನೀತಿಯ ಬಗ್ಗೆ ಪ್ರಶ್ನೆ ಮಾಡುತ್ತೇನೆ. ಸುಳ್ಯದ ಗುತ್ತಿಗಾರು, ಕೊಲ್ಲೆಮೊಗ್ರ ಪುತ್ತು ಸುಬ್ರಮಣ್ಯ ಈ ಮೂರು ಗ್ರಾಮಾಂತರ ಪ್ರದೇಶದಲ್ಲಿ ವೈದ್ಯರುಗಳಿಲ್ಲ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಕ್ಕೆ ವೈದ್ಯರನ್ನು ನೇಮಕ ಮಾಡಿದಾಗ ಅವರು ಅಲ್ಲಿ ಹೋಗಿ ರಿಪೋರ್ಟ್ ಮಾಡಿಕೊಳ್ಳುತ್ತಿಲ್ಲ. ಇದರಿಂದ ಗ್ರಾಮಾಂತರ ಪ್ರದೇಶಕ್ಕೆ ವೈದ್ಯರ ನೇಮಕಾತಿಗಳು ಕೇವಲ ಪುಸ್ತಕದಲ್ಲಿ ಉಳಿಯುತ್ತಿದೆ. ಇದಕ್ಕೆ ಬದಲಿ ವ್ಯವಸ್ಥೆಯನ್ನೇನಾದರೂ ಸರ್ಕಾರ ಮಾಡಲು ತಯಾರಾಗಿದೆಯೇ? ಆ ರೀತಿ ಮಾಡಿದ್ದರೆ ಅದರ ಬಗ್ಗೆ ಸರ್ಕಾರ ಹೇಳಬೇಕು. ಸುಳ್ಯ ಮಲೆನಾಡಿನ ಪ್ರದೇಶ. ಇಲ್ಲಿ ಮಲೇರಿಯಾ ಬಂದಿದೆ. ಇಂಥ ಪ್ರದೇಶದಲ್ಲಿ ಖಾಸಗಿ ಚಿಕಿತ್ಸಾಲಯವಿಲ್ಲ. ಆದ್ದರಿಂದ ಇಂಥ ಕಡೆ ವೈದ್ಯರು ಇಲ್ಲದಂಥ ಸಂದರ್ಭದಲ್ಲಿ ಸಂಚಾರಿ ಆಸ್ಪತ್ರೆಯ ಮೂಲಕ ವಾರಕ್ಕೆ ಕನಿಷ್ಟ ಎರಡು ದಿನ ಅಲ್ಲಿನ ಜನರಿಗೆ ವೈದ್ಯಕೀಯ ಚಿಕಿತ್ಸೆ ಕೊಡಲು ಸಾಧ್ಯವಿದೆಯೇ?

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಸುಳ್ಯ ಒಂದು ಮೀಸಲು ಕ್ಷೇತ್ರ. ಟ್ರೈಬಲ್ ಜನರಿರುವ ಪ್ರದೇಶ. ಅಲ್ಲಿ ಮೊಬೈಲ್ ಟ್ರೈಬಲ್ ಯೂನಿಟ್ ಆಸ್ಪತ್ರೆ ಕೆಲಸ ಮಾಡುತ್ತಿದೆ. ಅಲ್ಲಿ ಐದು (ಪಿ.ಹೆಚ್.ಸಿ. ಒಂದು ಸಿ.ಹೆಚ್.ಯು) ಸುಳ್ಯದಲ್ಲೇ ಒಂದು ಕಮ್ಯುನಿಟಿ ಹೆಲ್ತ್ ಸೆಂಟರ್ ಇದೆ. ಒಟ್ಟು ಮಂಜೂರಾದ ವೈದ್ಯರ ಹುದ್ದೆ ಹತ್ತು, ಅದರಲ್ಲಿ ಏಳು ವೈದ್ಯರು ಕೆಲಸ ಮಾಡುತ್ತಿದ್ದಾರೆ. ಈಗ ಕೆಪಿಎಸ್‌ಸಿ ಯಿಂದ ಏನು ವೈದ್ಯರನ್ನು ನೇಮಕ ಮಾಡಿದ್ದೇವೆ ಅವರು ಕಡ್ಡಾಯವಾಗಿ ಐದು ಇಲ್ಲವೇ ಆರು ವರ್ಷಗಳ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡಬೇಕು. ಹೊಸದಾಗಿ ನೇಮಕವಾಗಿರುವ ವೈದ್ಯರುಗಳು ರಿಪೋರ್ಟ್ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಹತ್ತು ಇಲ್ಲವೇ ಹದಿನೈದು ದಿವಸಗಳಲ್ಲಿ ಇವೆಲ್ಲವನ್ನು ಸೆಟಲ್ ಮಾಡುತ್ತೇವೆ.

ಶ್ರೀ ಎ.ರುಕ್ಕಯ್ಯ ಪೂಜಾರ್: ಮಾನ್ಯ ಅಧ್ಯಕ್ಷರೆ, ವೈದ್ಯರ ನೇಮಕ ಮಾಡುವುದಕ್ಕೆ ತೊಂದರೆ ಇಲ್ಲ. ಆದರೆ ಅವರು ಗ್ರಾಮಾಂತರ ಪ್ರದೇಶಕ್ಕೆ ಹೋಗುವುದಿಲ್ಲ. ನೇಮಕ ಮಾಡಿದಮೇಲೆ ಅವರು ರಿಪೋರ್ಟ್ ಮಾಡಿಕೊಳ್ಳುತ್ತಾರೆ. ಆ ತಕ್ಷಣ ವರ್ಗಾವಣೆ ತೆಗೆದುಕೊಳ್ಳುತ್ತಾರೆ. ಆದ್ದರಿಂದ ನೇಮಕವಾದ ಮೇಲೆ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಐದು ಇಲ್ಲವೆ ಆರು ವರ್ಷ ಸೇವೆ ಸಲ್ಲಿಸುವ ವ್ಯವಸ್ಥೆ ಮಾಡುತ್ತೀರೋ?

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಕೆ.ಪಿ.ಎಸ್.ಸಿ.ಯಲ್ಲಿ ಆಯ್ಕೆಯಾಗಿರುವ ಒಬ್ಬರಿಗೂ ಸಹ ನಗರದಲ್ಲಿ ಸೇವೆ ಮಾಡಲು ಅವಕಾಶ ಕೊಡುವುದಿಲ್ಲ. ಆಯ್ಕೆಯಾಗಿರುವ ಆರುನೂರು ವೈದ್ಯರುಗಳು ಕಡ್ಡಾಯವಾಗಿ ಐದರಿಂದ ಆರುವರ್ಷಗಳ ಕಾಲ ಗ್ರಾಮೀಣ ಪ್ರದೇಶದಲ್ಲಿ ಸೇವೆ ಮಾಡಲೇ ಬೇಕು.

ಶ್ರೀಮತಿ ಪ್ರಮೀಳನೇಸರ್ಗಿ: ಮಾನ್ಯ ಅಧ್ಯಕ್ಷರೆ, ಮಹಿಳಾ ವೈದ್ಯರು ನೇಮಕವಾಗತಕ್ಕ ಸಂದರ್ಭದಲ್ಲಿ, ಅವರನ್ನು ಹಳ್ಳಿಗಾಡಿನಲ್ಲಿ ಸೇವೆಗೆ ಹಾಕಿದಾಗ ಕಿಟಕಿ, ಬಾಗಿಲು ಇಲ್ಲದಿರುವ ಕಟ್ಟಡಗಳಿಗೆ, ಎಷ್ಟೋ ಕಡೆ ಮನೆಗಳೇ ಇಲ್ಲದಿರುವ ಕಡೆ ಹಾಕಿದರೆ ಹೇಗೆ? ಅವರಿಗೆ ಅಗತ್ಯವಿರುವ ಎಲ್ಲಾ ವ್ಯವಸ್ಥೆ ಮಾಡಿ ನೇಮಕ ಮಾಡಿದರೆ ಎಲ್ಲರೂ ಹೋಗಲು ತಯಾರಾಗಿದ್ದಾರೆ. ಅದನ್ನು ಮಾಡದೇ ಹಳ್ಳಿಗಳಿಗೆ ಸೇವೆ ಮಾಡಲು ಹೋಗಿ ಎಂದು ಹೇಳಿದರೆ ತೊಂದರೆಯಾಗುತ್ತದೆ. ಆದ್ದರಿಂದ ಮೂಲಭೂತ ಸೌಲಭ್ಯಗಳನ್ನು ಮಾಡಿ ಆನಂತರ ಮಹಿಳೆಯರಿಗೆ ವೈದ್ಯವೃತ್ತಿ ಮಾಡಲು ಹಳ್ಳಿಗಳಿಗೆ ಹೋಗುವಂತೆ ಮಾಡಬೇಕು.

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ ಸರಿಯಾದ ಅಂಕಿ ಅಂಶವಿಲ್ಲ. ಆದರೆ ಸುಮಾರು 175-190, ಗ್ರಾಮೀಣ ಪ್ರದೇಶದಲ್ಲಿ ಭಾರತ ಸರ್ಕಾರದ ಪ್ಯಾಟ್ರನ್ ಆಸ್ಪತ್ರೆಗಳೆಂದು ಹಿಂದೆ 80 ಸಾವಿರದಿಂದ 1 ಲಕ್ಷ ಜನಸಂಖ್ಯೆಗೆ ಒಂದು ಆಸ್ಪತ್ರೆಯನ್ನು ತೆರೆಯುತ್ತಿದ್ದೆವು. ಅಂಥ ಆಸ್ಪತ್ರೆಗೆ ಒಬ್ಬರು ಮಹಿಳಾ ಮತ್ತು ಒಬ್ಬರು ಪುರುಷ ವೈದ್ಯರು ಇರತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದರು. ಆ ಆಸ್ಪತ್ರೆಗಳಿಗೆ ಕಟ್ಟಡ ಮಾಡತಕ್ಕ ಸಂದರ್ಭದಲ್ಲಿ ವೈದ್ಯರಿಗೆ ವಸತಿಗೃಹ ಮತ್ತು ಇತರೆ ವ್ಯವಸ್ಥೆಗಳನ್ನು ಮಾಡಲಾಗಿದೆ. ಐ.ಪಿ.ಪಿ.9ರ ಕೆಳಗಡೆ ಸುಮಾರು 271 ವೈದ್ಯಾಧಿಕಾರಿಗಳ ಕಟ್ಟಡವನ್ನು ನಿರ್ಮಾಣ ಮಾಡಲು ಅವಕಾಶವನ್ನು ಕಲ್ಪಿಸಿದ್ದೇವೆ. ಖಾಲಿ ಇರುವ ಮಹಿಳಾ ಹುದ್ದೆಗಳಲ್ಲಿ 80-90 ಭಾಗ ತುಂಬುವ ಪ್ರಯತ್ನ ಮಾಡಿದ್ದೇನೆ. ಕಟ್ಟಡದ ದುರಸ್ತಿ ಕೆಲಸ ಮತ್ತು ಕಟ್ಟಡಗಳನ್ನು ಒದಗಿಸಲು ಈ ಯೋಜನೆಯಲ್ಲಿ ಅವಕಾಶ ಮಾಡಿದ್ದೇವೆ.

ಅಧ್ಯಕ್ಷರು: ಮಹಿಳಾ ಸದಸ್ಯರು, ತಾವು ಮಹಿಳಾ ವೈದ್ಯರನ್ನೇನು ಗ್ರಾಮೀಣ ಪ್ರದೇಶಕ್ಕೆ ಪೋಸ್ಟ್ ಮಾಡುತ್ತೀರಿ ಅಲ್ಲಿ ಅವರಿಗೆ ಅಗತ್ಯವಾದ ಅನುಕೂಲಗಳು ಇರುವುದಿಲ್ಲ, ಆದ್ದರಿಂದ ಮಹಿಳಾ ವೈದ್ಯರುಗಳು ಹೋಗುವುದಿಲ್ಲವೆಂದು ಹೇಳುತ್ತಾರೆ.

ಡಾ: ಹೆಚ್.ಸಿ.ಮಹದೇವಪ್ಪ: ಮಹಿಳಾ ವೈದ್ಯರನ್ನು ಪೋಸ್ಟ್ ಮಾಡತಕ್ಕ ಸಮಯದಲ್ಲಿ ವಸತಿಗೃಹವಿದೆಯೇ, ಶೌಚಾಲಯವಿದೆಯೇ ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಮಾಡಲು ಪ್ರಯತ್ನ ಪಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಕಳೆದ ಹಲವಾರು ವರ್ಷಗಳಿಂದ ಕೆಪಿಎಸ್‌ಸಿಯಿಂದ ವೈದ್ಯರುಗಳನ್ನು ನೇಮಕ ಮಾಡಿಕೊಂಡು ಹುದ್ದೆ ಖಾಲಿ ಇರಲು

ಬಿಡುವುದಿಲ್ಲವೆಂದು ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ. ನಾನು ನಿನ್ನೆ ಅನಿವಾರ್ಯವಾಗಿ ಶಿಕಾರಿಪುರದಲ್ಲೇ ಉಳಿದು ಬಂದೆ. ಊರಿನಲ್ಲ ಓಡಾಡಲು ಆಗಲಿಲ್ಲ. ಅಲ್ಲಿ ಇದ್ದಂಥ ವೈದ್ಯರನ್ನು ವರ್ಗಾವಣೆ ಮಾಡಿದ್ದಾರೆ. ಒಬ್ಬರೇ ವೈದ್ಯಾಧಿಕಾರಿ ಅಲ್ಲಿದ್ದಾರೆ. ನಿಮ್ಮ ಕಾಲದಲ್ಲಾದರೂ ಗ್ರಾಮೀಣ ಪ್ರದೇಶಗಳಲ್ಲಿ, ತಾಲ್ಲೂಕುಕೇಂದ್ರಗಳಲ್ಲಿ ಅಗತ್ಯವಿರುವ ಎಲ್ಲಾ ವೈದ್ಯರುಗಳು ಇರುವಂತೆ ಮಾಡುತ್ತೀರಾ? ಶಿಕಾರಿಪುರದಂಥ ತಾಲ್ಲೂಕಿನಲ್ಲಿ ಒಬ್ಬರು ವೈದ್ಯರಿದ್ದಾರೆಂದರೆ ಜನರಿಗೆ ನಾನೇನು ಉತ್ತರ ಕೊಡಲಿ?

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರ ಹಿಂದುಳಿದ ಕ್ಷೇತ್ರ. ಅಲ್ಲಿಗೆ ಯಾರೂ ವೈದ್ಯರು ಹೋಗುವುದಿಲ್ಲ. ಇರತಕ್ಕ ವೈದ್ಯರನ್ನು ತೆಗೆಯಬೇಡಿ ಎಂದು ಅವರಲ್ಲಿ ಮನವಿ ಮಾಡಿಕೊಂಡಿದ್ದೆವು. ಆದರೂ ಅವರನ್ನು ವರ್ಗಾವಣೆ ಮಾಡಿದರೆ ಬೇರೆ ಯಾರೂ ಅಲ್ಲಿಗೆ ಬರುವುದಿಲ್ಲ. ನಮ್ಮ ಇಡೀ ತಾಲ್ಲೂಕಿನಲ್ಲಿ ಒಬ್ಬರು ವೈದ್ಯರೂ ಸಹ ಇಲ್ಲ. ಆದ್ದರಿಂದ ಹೊಸಬರಾದ ವೈದ್ಯರನ್ನು ಹಾಕಿದರೂ ಹೋಗುವುದಿಲ್ಲ, ಹೀಗಿದ್ದಮೇಲೆ ಅಲ್ಲೇ ಇರುವುದಾಗಿ ಹೇಳುವ ವೈದ್ಯರನ್ನೇಕೆ ವರ್ಗಾವಣೆ ಮಾಡುತ್ತೀರಿ?

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಹಿರಿಯ ಸದಸ್ಯರು ವೈದ್ಯರ ಹುದ್ದೆ ತುಂಬುವ ವಿಚಾರದಲ್ಲಿ ಮಾತನಾಡಿದ್ದಾರೆ. ಶಿಕಾರಿಪುರದಿಂದ ಹಿಡಿದು ಎಲ್ಲಾ ಕಡೆಗೂ ವೈದ್ಯರನ್ನು ತುಂಬಬೇಕು ಎಂಬುದು ಸರ್ಕಾರದ ಉದ್ದೇಶ. ಗುತ್ತಿಗೆ ಆಧಾರದ ಮೇಲೆ, ಕೆಪಿಎಸ್‌ಸಿ ಮೂಲಕ ವೈದ್ಯರನ್ನು ತುಂಬಿದ್ದೇವೆ. ಇನ್ನು ಅಗತ್ಯವಿದ್ದರೆ ಜಿಲ್ಲಾಧಿಕಾರಿಯವರಿಗೆ ಅಧಿಕಾರ ಕೊಟ್ಟು ಎಲ್ಲೂ ವೈದ್ಯರ ಹುದ್ದೆ ಖಾಲಿ ಇರಬಾರದು ಎಂಬ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಇರತಕ್ಕ ವೈದ್ಯರನ್ನು ಬೇರೆ ಕಡೆ ಯಾಕೆ ವರ್ಗಾವಣೆ ಮಾಡಿದ್ದೇವೆಂದರೆ, ಅನೇಕ ವರ್ಷಗಳಿಂದ ವೈದ್ಯಕೀಯ ಸಂಘ ಸರ್ಕಾರದಲ್ಲಿ ಬೇಡಿಕೆಗಳನ್ನಿಟ್ಟು ವೈದರಿಗೆ ಬಡ್ತಿಕೊಡಬೇಕು, ಟೈಮ್‌ಬೌಂಡ್ ಕೊಡಬೇಕು, ಅವರ ಜೇಷ್ಠತೆಯನ್ನು ಪರಿಗಣಿಸಬೇಕು ಅವರ ತಜ್ಞತೆಯನ್ನು ಪರಿಗಣಿಸಬೇಕೆಂದು ಕೇಳಿದ್ದಾರೆ. ಅದರ ಪ್ರಕಾರ ವೈದ್ಯರ ಸೇವೆಯನ್ನು ಬಳಕೆ ಮಾಡಿಕೊಂಡರೆ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ, ತಾಲ್ಲೂಕು ಮಟ್ಟದಲ್ಲಿ ಸಾಮಾನ್ಯವಾಗಿ ತಜ್ಞ ವೈದ್ಯರು ಪ್ರಾಕ್ಟೀಸ್ ಮಾಡುವುದಿಲ್ಲ. ಸರ್ಕಾರದಲ್ಲೇ ತಜ್ಞ ವೈದ್ಯರ ಸೇವೆ ಲಭ್ಯವಾಗುತ್ತದೆಂದರೆ ಖಾಸಗಿ ಕ್ಷೇತ್ರಕ್ಕೆ ಕಡಿಮೆಜನರು ಹೋಗುತ್ತಾರೆ ಎನ್ನತಕ್ಕ ಉದ್ದೇಶವನ್ನಿಟ್ಟುಕೊಂಡು ಭಾರತ ದೇಶದಲ್ಲೇ ಪ್ರಥಮವಾಗಿ ಪಾಲಿಸಿ ನಿರ್ಣಯವನ್ನು ನಮ್ಮ ಸರ್ಕಾರ ಮಾಡಿದೆ. ಅದಕ್ಕೆ ಇಡೀ ವೈದ್ಯರ ಸಂಘ ಅಭಿನಂದನೆಗಳನ್ನು ವ್ಯಕ್ತಮಾಡಿದೆ. ಆದರೆ ಎಲ್ಲೆಲ್ಲಿ ವೈದ್ಯರುಗಳು ಪ್ರಾಕ್ಟೀಸ್‌ನ್ನು ಸೆಟ್‌ಆಪ್ ಮಾಡಿಕೊಂಡಿದ್ದಾರೆ ಅವರು ಆ ಊರನ್ನುಬಿಟ್ಟರೆ ಊರೇ ಮುಳುಗಿಹೋಗುತ್ತದೆ ಎನ್ನತಕ್ಕ ಒತ್ತಡವನ್ನು ತರುತ್ತಿದ್ದಾರೆ. ಇವರಿಗೆ ಪ್ರಾಕ್ಟೀಸ್ ಮಾಡಬೇಕೆಂಬ ಉದ್ದೇಶವಿರುತ್ತದೆಯೇ ವಿನಹ ಜನರಿಗೆ ಸೇವೆ ಮಾಡಬೇಕೆಂಬ ಉದ್ದೇಶವಿರುವುದಿಲ್ಲ. ಶಾಸಕರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಜೇಷ್ಠತೆ

ಮತ್ತು ತಜ್ಞತೆಗೆ ನ್ಯೂನತೆಯಾಗದಂತೆ ಕ್ರಮ ಕೈಗೊಳ್ಳುತ್ತೇವೆ. ಒಂದು ವೇಳೆ ಸೇವೆಯನ್ನು ಗ್ರಾಮೀಣ ಪ್ರದೇಶದಲ್ಲೇ ಮಾಡುತ್ತೇನೆಂದು ಹೇಳಿದರೆ ಅವರು ತಜ್ಞರಾಗಿದ್ದರೆ, ನನಗೆ ಬಡ್ತಿ ಬೇಡ ಎಂದು ಬರೆದುಕೊಟ್ಟರೆ ಆ ವೈದ್ಯರನ್ನು ಅಲ್ಲೇ ಉಳಿಸಲು ನನಗೆ ಅಭ್ಯಂತರವಿಲ್ಲ. ಆದ್ದರಿಂದ ತಮ್ಮೆಲ್ಲರ ಸಹಕಾರ ಕೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬಡ್ತಿಯನ್ನು ಕೊಟ್ಟರೆ ಗ್ರಾಮೀಣ ಪ್ರದೇಶಕ್ಕೆ ತಾಲ್ಲೂಕು ಮಟ್ಟದಲ್ಲಿ ಅಂಥ ವೈದ್ಯರನ್ನು ಕೊಡಿ ಎಂದರೆ ಬಡ್ತಿ ಬೇಡವೆಂದು ಬರೆದುಕೊಟ್ಟರೆ ಕೊಡುವುದಾಗಿ ಹೇಳುತ್ತೀರಿ. ಗ್ರಾಮೀಣ ಪ್ರದೇಶದಲ್ಲಿ ತಜ್ಞ ವೈದ್ಯರುಗಳು ಬೇಡವೆ? ಗ್ರಾಮೀಣ ಪ್ರದೇಶದಲ್ಲಿ ಎಲ್ಲಿ ತಜ್ಞ ವೈದ್ಯರು ಇರಲು ಸಿದ್ಧವಾಗಿದ್ದಾರೋ ಅವರಿಗೆ ಅಲ್ಲೇ ಇರಲು ಅವಕಾಶ ಕೊಡಿ. ಬಡ್ತಿ ಬೇಡವೆಂದರೆ ಅವರನ್ನು ಅಲ್ಲೇ ಇರಲು ಅವಕಾಶ ಕೊಡುವುದಾಗಿ ಹೇಳುತ್ತಿದ್ದಾರೆ.

ಅಧ್ಯಕ್ಷರು: ಕೆಲವರು ಪ್ರಾಕ್ಟೀಸ್ ಮಾಡಿಕೊಂಡಿರುತ್ತಾರೆ, ಅವರೇ ಒತ್ತಡವನ್ನು ತರುತ್ತಾರೆ. ಅದನ್ನು ಪರಿಗಣನೆ ಮಾಡಲು ಆಗುವುದಿಲ್ಲವೆಂದು ಅವರು ಹೇಳಿದ್ದುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರು ಪ್ರಾಕ್ಟೀಸ್ ಮಾಡುತ್ತಿರುತ್ತಾರೆ, ಅವರಿಗೆ ಉತ್ತೇಜನ ಕೊಡಬೇಡಿ. ಯಾರು ಪ್ರಾಕ್ಟೀಸ್ ಮಾಡದೆಯೇ ಪ್ರಾಮಾಣಿಕವಾಗಿ ಸೇವೆ ಮಾಡುತ್ತಿದ್ದಾರೆ ಅವರನ್ನು ಅಲ್ಲೇ ಇರಲು ವ್ಯವಸ್ಥೆ ಮಾಡಿ.

ಡಾ: ಹೆಚ್.ಸಿ.ಮಹದೇವಪ್ಪ: ಅವರಿಗೆ ಬಡ್ತಿ ಬೇಕು ನೆಂಟೂ ಬೇಕು, ಯಾವುದಾದರೊಂದನ್ನು ತ್ಯಾಗ ಮಾಡಬೇಕಾಗುತ್ತದೆ.

ಶ್ರೀ ಎಸ್.ರಾಜೇಂದ್ರನ್: ಅಧ್ಯಕ್ಷರೆ, ಬಡ್ತಿ ಬೇಡವೆಂದು ಬರೆದುಕೊಟ್ಟರೆ ಅವರನ್ನು ಅಲ್ಲೆ ಇರಲು ಬಿಡುವುದಾಗಿ ಅವರು ಹೇಳಿದ್ದುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರ್ಯಾರು ಪ್ರಾಕ್ಟೀಸ್ ಮಾಡದ ತಜ್ಞರಿದ್ದಾರೆ ಅಂಥವರನ್ನು ಪ್ರಮೋಷನ್ ಸಹಿತ ಅಲ್ಲೇ ಇರಲು ಬಿಡುತ್ತೀರೊ?

ಅಧ್ಯಕ್ಷರು: ಪ್ರಾಕ್ಟೀಸ್ ಮಾಡದಿರುವವರಿಗೆ ಅಲ್ಲೇ ಇರಲು ತೊಂದರೆಯಿಲ್ಲ.

ಡಾ: ಹೆಚ್.ಸಿ.ಮಹದೇವಪ್ಪ: ಸೇವಾ ಮನೋಭಾವನೆ ಇಟ್ಟುಕೊಂಡಿರುವವರು ಕೆಲಸ ಮಾಡುವುದಾದರೆ ತೊಂದರೆ ಇಲ್ಲ.

ಶ್ರೀ ಜಿ.ಚಂದ್ರಣ್ಣ: ತಾವು ವೈದ್ಯರನ್ನು ಹಾಕುತ್ತೀರಿ ಆದರೆ ಅವರು ಆ ಸ್ಥಳಗಳಿಗೆ ಹೋಗುವುದಿಲ್ಲ. ಅಂಥವರನ್ನು ತಾವು ಸಸ್ಪೆಂಡ್ ಮಾಡಬೇಕು. ವಿಜಯಪುರದಲ್ಲಿ ಸುಮಾರು ಎರಡು ವರ್ಷಗಳಿಂದ ಒಬ್ಬರು ಮಹಿಳಾ ವೈದ್ಯರು ಇಲ್ಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಗಂಡ ಹೆಂಡತಿ ವೈದ್ಯರಾಗಿದ್ದರೆ, ಒಬ್ಬರನ್ನು ಒಂದು ಕಡೆ ಮತ್ತೊಬ್ಬರನ್ನು ಇನ್ನೊಂದು ಕಡೆ ಹಾಕಿಬಿಟ್ಟರೆ ಹೇಗೆ?

ಅಧ್ಯಕ್ಷರು: ಅವರಿಬ್ಬರು ಒಟ್ಟಿಗೆ ಇರಲು ಬಿಟ್ಟುಬಿಡಿ; ಜನರು ಏನು ಬೇಕಾದರೂ ಆಗಲಿ.

ಅಧ್ಯಕ್ಷರು: ಯಡಿಯೂರಪ್ಪನವರೇ, ಒಂದು ನಿಮಿಷ, ನಾನು ಅನೇಕ ಸಭೆಗಳಲ್ಲಿ ಈ ವಿಷಯವನ್ನು ಹೇಳಿಕೊಂಡು ಬಂದಿದ್ದೇನೆ. ಇವತ್ತು ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ 67 ಪರ್ಸೆಂಟ್‌ಗೆ ಬಂದಿದೆ. ಈ ರಾಜ್ಯದ ಖಜಾನೆಯಲ್ಲಿ ಇರತಕ್ಕಂಥ ಹಣವನ್ನು ಸಂಬಳಸಾರಿಗೆ ಎಲ್ಲಾ ಕೊಟ್ಟು ಸಾಕಿ, ವಿಜೃಂಭಿಸುವುದಕ್ಕೆ ನೂರಕ್ಕೆ 67 ರೂಪಾಯಿಯನ್ನು ಒಂದು ಪರ್ಸೆಂಟ್ ಜನರಿಗೆ ಕೊಟ್ಟು, ಉಳಿದ 33 ರೂಪಾಯಿಯನ್ನು 99 ಪರ್ಸೆಂಟ್ ಜನರಿಗೆ ಕೊಡುತ್ತಿದ್ದಾರೆ. ಅವರಿಗೆ ಇನ್ನೂ ಸಾಕಾಗಿಲ್ಲ, ಇನ್ನೂ ತೃಪ್ತಿ ಇಲ್ಲ, ಅವರು ಅಲ್ಲೇ ಇರಬೇಕು, ಅಲ್ಲೇ ಎಲ್ಲಾ ಸೌಕರ್ಯ ಅವರಿಗೆ ಆಗಬೇಕು. ನಾವು ನೀವು ಎಲ್ಲರೂ ಸೇರಿ ಮೀಟ್ ಮಾಡುವ ಸಂದರ್ಶಕರಲ್ಲಿ 95 ಪರ್ಸೆಂಟ್ ಜನ ಈ ಸರ್ವೀಸ್ ಮ್ಯಾಟರ್ಸ್‌ಗೆ ಬರುವವರೇ. ನಮ್ಮ ಊರಿನ ಜನ ಯಾರೂ ನಮ್ಮ ಹತ್ತಿರ ಬರುವುದಿಲ್ಲ. ನಾವು ಇನ್ನೂ ಏನೇನು ಮಾಡಬೇಕೋ ಏನೇನು ವಿಕಾರಗಳನ್ನು ಕಾಣಬೇಕೋ ಗೊತ್ತಿಲ್ಲ.

ಡಾ. ಹೆಚ್.ಸಿ.ಮಹದೇವಪ್ಪ: ನಮಗೆ ಏನು ಕಷ್ಟ ಬಂದಿದೆ ಅಂದರೆ, ವರ್ಗಾವಣೆ ಆದ ತಕ್ಷಣ ವೈದ್ಯರಿಗೆ ಮತ್ತು ವೈದ್ಯರ ಮನೆಯವರಿಗೆ ವಿಪರೀತ ಕಾಯಿಲೆ ಬಂದು ಬಿಡುತ್ತದೆ. ಜನರ ಕಾಯಿಲೆಯನ್ನು ಯಾವ ರೀತಿ ನೋಡಿಸುವುದು?

ಅಧ್ಯಕ್ಷರು: ಈಗ ಯಾರೂ ಅಪ್ಪ ಅಮ್ಮನಿಗೆ ಊಟ ಹಾಕುವುದಿಲ್ಲ. ಮಾತು ಎತ್ತಿದರೆ, ನಮ್ಮ ತಾಯಿ ವೃದ್ದೆ, ನಮ್ಮ ತಂದೆ ವೃದ್ದ ಎನ್ನುತ್ತಾರೆ. ಇವರಿಗೆ 48 ವರ್ಷ ಆಗಿರುತ್ತದೆ, ಇನ್ನೂ ಅವರ ತಂದೆತಾಯಿ ವೃದ್ದರಾಗದೆ ಯುವಕರಾಗೇ ಇರುತ್ತಾರೆಯೇ.

ಶ್ರೀ ಎಸ್.ಸುರೇಶ್ ಕುಮಾರ್: ನನ್ನ 3171ನೇ ಪ್ರಶ್ನೆಗೆ ನಿಜವಾದ ಅಸಲಿ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಬೇಕು.

ಶ್ರೀ ಎಂ.ಸಿ.ನಾಣಯ್ಯ: ನೀವು ಕೇಳಿದಂತಹ ಪ್ರಶ್ನೆಗೆ ನಿಜವಾದ ಅಸಲಿ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.